೧೧. ಮೈಸೂರು ನಗರಪಾಲಿಕೆಯವರು ಪೌರ ಕಾರ್ಮಿಕರ ಹುದ್ದೆಗಳನ್ನು ಭರ್ತಿ ಮಾಡದೆ ಇರುವ ಬಗ್ಗೆ

ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ಅಧ್ಯಕ್ಷರೆ. ಮೈಸೂರು ನಗರವು ರಾಜ್ಯದಲ್ಲಿ ಒಂದು ಸೌಂದರ್ಯ ನಗರವೆಂದು ಹೆಸರಾಗಿದೆ. ಆದರೆ ಈಗ ಈ ನಗರದ ಪರಿಸ್ಥಿತಿಯನ್ನು ನೋಡಿದರೆ ಪ್ರತಿಯೊಬ್ಬ ನಾಗರೀಕನೂ ನಾಚುವಂಥಾದ್ದಾಗಿದೆ. ಇದಕ್ಕೆ ಮೈಸೂರು ನಗರ ಪಾಲಿಕೆಯ ಉದಾಸೀನತೆ ಹಾಗೂ ಸರ್ಕಾರದ ನಿರ್ಲಕ್ಷ್ಯತೆ ಕಾರಣವಾಗಿದೆ.

ಇತ್ತೀಚೆಗೆ ನಗರದಲ್ಲಿ ಕಾಣುವ ದೃಶ್ಯಗಳೆಂದರೆ ಅಲ್ಲಲ್ಲಿ, ಕಸಕಡ್ಡಿಯಿಂದ ಕೂಡಿದ ರಸ್ತೆಗಳು, ಮ್ಯಾನ್ ಹೋಲ್‌ಗಳಿಂದ ಹೊರ ಹರಿಯುವ ಕಲ್ಮಶದ ನೀರು, ಕೆಲವು ಕಡೆಗಳಲ್ಲಿ ಸತ್ತು ಕೊಳೆತು ದುರ್ನಾತ ಬಡಿಯುವ ಪ್ರಾಣಿಗಳು ನಗರದ ನಾಗರೀಕರಿಗೆ ಇವು ಪ್ರತಿನಿತ್ಯದ ದರ್ಶನವಾಗಿದೆ.

ನಗರವನ್ನು ಸೌಂದರ್ಯವಾಗಿಡಲು ಬಹು ಮುಖ್ಯವಾಗಿ ಇರಬೇಕಾದಂಥ ನಗರಪಾಲಿಕೆಯ ಪೌರ ಕಾರ್ಮಿಕ ಬಂಧುಗಳು ಅತ್ಯಂತ ಕಡಿಮೆ ಇರುವುದು ಕಾರಣವಾಗಿದೆ. ಕಡಿಮೆ ಪೌರ ಕಾರ್ಮಿಕರಿರುವುದರಿಂದ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲು ಉದ್ದೇಶಿಸಿ ಮೈಸೂರು ನಗರ ಪಾಲಿಕೆ ಸುಮಾರು ಐದಾರು ತಿಂಗಳ ಹಿಂದೆಯೇ ಸಂದರ್ಶನ ನಡೆಸಿದ್ದರೂ ಇದುವರೆಗೆ ಪೌರ ಕಾರ್ಮಿಕ ಹುದ್ದೆಗೆ ನೇಮಕ ಮಾಡಿಲ್ಲ.

ಆದ್ದರಿಂದ, ಮೈಸೂರು ನಗರವನ್ನು ಸೌಂದರ್ಯವಾಗಿಡಲು ಮತ್ತು ನಗರಪಾಲಿಕೆಗೆ ಕೂಡಲೇ ಪೌರ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲು ಮಾನ್ಯ ನಗರಾಭಿವೃದ್ಧಿ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ವಿ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ. ಮೈಸೂರು ನಗರಪಾಲಿಕೆಯವರು ಪೌರ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳಬೇಕಾದ ವಿಚಾರದಲ್ಲಿ ೫೦೦ ಜನ ನಾಗರೀಕರಿಗೆ ಒಬ್ಬರಂತೆ ೧೯೨ ಜನ ಪೌರ ಕಾರ್ಮಿಕರನ್ನು ನೇಮಿಸಿಕೊಳ್ಳುವ ಪ್ರಸ್ತಾವನೆಯನ್ನು ಇಟ್ಟುಕೊಂಡಿದ್ದಾರೆ ೪೦ ಜನರನ್ನು ಮಾನವೀಯತೆಯ ದೃಷ್ಟಿಯಿಂದ ದಿನಗೂಲಿಯ ಮೇಲೆ ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ ಇನ್ನೂ ೧೫೨ ಜನ ಪೌರ ಕಾರ್ಮಿಕರನ್ನು ಇನ್ನು ೨-೩ ವಾರಗಳಲ್ಲಿ ಕೆಲಸಕ್ಕೆ ನೇಮಕ ಮಾಡಿಕೊಳ್ಳುತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ ಮೈಸೂರು ನಗರ ಕಾರ್ಪೊರೇಷನ್‌ನವರು ಇದರ ಜೊತೆಗೆ ೨೦೦ ಕಸದ ತೊಟ್ಟಿಗಳನ್ನು ಈಗಾಗಲೇ ಕೊಂಡುಕೊಳ್ಳಲಾಗಿದೆ. ಈ ಎಲ್ಲ ಕಾರ್ಯಕ್ರಮಗಳೂ ಆದರೆ ಆಗ ನಗರದ ಆಸ್ಪೆರ್ಮಲ್ಕೀಕರಣ ಸ್ವಲ್ಪವಾಟ್ಟಿಗಾದರೂ ಕಡಿಮೆಯಾಗುತ್ತದೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

೧೨) ಪುತ್ತೂರು ತಾಲ್ಲೂಕಿನ ಕಡಬಕ್ಕೆ ವಿದ್ಯುತ್ ಸೆಕ್ಷನ್ ಕಛೇರಿಯೆನ್ನು ತೆರೆಯುವ ಬಗ್ಗೆ.

೧-೦೦ ಪಿ.ಎಂ.

† **ಶ್ರೀ ಕೆ. ಕುಶಾಲ (ಸುಳ್ಯ).**—ಮಾನ್ಯ ಅಧ್ಯಕ್ಷರೆ ಸುಳ್ಯ ವಿಧಾನಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿನ ಕಡಬ ಎಂಬಲ್ಲಿ ವಿದ್ಯುತ್ ಇಲಾಖೆಯು ವಿದ್ಯುತ್ ಸೆಕ್ಷನ್ ಕಚೇರಿಯನ್ನು ತೆರೆಯುವ ಪ್ರಸ್ತಾವನೆಯಂತೆ. ಇಲಾಖಾ ಪರವಾಯಿ ಸರಕಾರದ ಮಂಜೂರಾತಿಗೆ ಹೋಗಿರುವುದೂ ತಿಳಿದು ಬಂದಿರುತ್ತದೆ. ಆದರೆ ಈತನಕ ಸದ್ರಿ ಕಡಬಕ್ಕೆ ವಿದ್ಯುತ್ ಸೆಕ್ಷನ್ ಕಛೇರಿ ತೆರೆಯುವ ವ್ಯವಸ್ಥೆಯು ಕಂಡು ಬರುತ್ತಿಲ್ಲ. ಈ ಪ್ರಸ್ತಾಪವು ಸರಕಾರದಿಂದ ಮಂಜೂರಾತಿಗೆ ಬಾಕಿ ಇರುವುದೇ? ಇಲ್ಲವೇ? ಸದ್ರಿ ಪ್ರಸ್ತಾಪವನ್ನು ಕೈಬಿಡಲಾಗಿದೆಯೇ? ಎಂದು ತಿಳಿಯಬಯಸುವುದರ ಮೂಲಕ, ಕಡಬದ ಪೇಟೆಗೆ

---

† ಈ ಚಿಹ್ನೆ ಸಂಬಂಧ ಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.